

# ಬೆಳಕಿನ ಕಾವ್ಯ!

■ ಗೌರಿ

**ಹೆಸರು:** ಆವೊ ಮನ್ ಹಲ್ಕಾ ಕರೆ
**ನಿರ್ದೇಶನ/ ನಿರ್ಮಾಣ:** ಸ್ಮೃತಿ ಸಿಂಗ್
**ಛಾಯಾಗ್ರಹಣ:** ರೋಹಿತ್ ಪಾಟೀಲ್
**ಧ್ವನಿ:** ರಾಜ್
**ತಾರಾಗಣ:** ಮಸೂದ್ ಅಕ್ತರ್;
ನಕ್ಷ್ ಉಪಾಧ್ಯಾಯ

## ದೃಶ್ಯ–ಕಾವ್ಯ ಎರಡೂ ಮಾಧ್ಯಮಗಳ ಸತ್ವವನ್ನು ಬಳಸಿಕೊಂಡು ಪ್ರಭಾವಶಾಲಿಯಾಗಿ ರೂಪಿಸಿದ ಕಿರುಚಿತ್ರವಿದು.

‘ಜೋ ಹೆ ಉಸಮೆ ಕಾಮ್ ಚಲಾಲೋ
ದಿಯಾ ನ ಸಹಿ ಮೊಂಬತ್ತಿ ಜಲಾಲೋ
ರೋಷನಿ ತೋ ದೋನೋ ಸೆ ಹಿ ಮಿಲತಿ ಹೈ
ಜೋ ಹೆ ಉಸಮೆ ಖುಷಿಯಾ ಪಾಲೊ’

(ಇರುವುದರಲ್ಲಿಯೇ ಕೆಲಸ ಸಂಭಾಳಿಸು / ಹಣತೆಯಿಲ್ಲದಿರೆ ಮೊಂಬತ್ತಿ ಉರಿಸು / ಎರಡರಿಂದಲೂ ಸಿಗುವುದು ಬೆಳಕೇ ತಾನೆ / ಏನಿದೆಯೋ ಅದರಲ್ಲಿಯೇ ಖುಷಿಯ ಅರಸು)

ಇದು ‘ಆವೊ ಮನ್ ಹಲ್ಕಾ ಕರೆ’ ಕಿರುಚಿತ್ರದಲ್ಲಿ ಬರುವ ಕಾವ್ಯದ ಸಾಲುಗಳು.

ವಸ್ತುವಾಗಲಿ, ವ್ಯಕ್ತಿಗಳಾಗಲಿ, ಜೊತೆಗಿದ್ದಾಗ ಅವರ ಬೆಲೆ ತಿಳಿಯುವುದಿಲ್ಲ; ಅಗಲಿದ ಮೇಲೆ ಬೆಲೆ ಅರಿತಾದ ಎದುರಿಗೆ ಅವರೇ ಇರುವುದಿಲ್ಲ. ಇಂಥ ಅಗಲುವಿಕೆಯ ನೋವನ್ನೇ ಕೇಂದ್ರದಲ್ಲಿಟ್ಟುಕೊಂಡು ಅದರ ಸುತ್ತಲೂ ಭಾವತರಂಗಗಳನ್ನು ಎಬ್ಬಿಸುತ್ತ ಹೋಗುವ ಕಿರುಚಿತ್ರ ‘ಆವೊ ಮನ್ ಹಲ್ಕಾ ಕರೆ’. ಇದನ್ನು ಕಿರುಚಿತ್ರ ಅನ್ನುವುದಕ್ಕಿಂತ ದೃಶ್ಯ ಕಾವ್ಯ ಅನ್ನಬಹುದೇನೋ. ನಿರ್ಮಲ ಕೊಳದೊಳಗೆ ಕಲ್ಲೆಸೆದಾಗ ಹುಟ್ಟುವ ಅಲೆಗಳ ಹಾಗೆ ಬೆಳೆಯುತ್ತ ಹೋಗುವ ಕಾವ್ಯ ಮತ್ತು ಮನದ ಭಾವಕೊಳವನ್ನು ಕಲ್ಲೋಲ ಮಾಡುವ ದೃಶ್ಯ ಎರಡೂ ಇಲ್ಲಿದೆ. ಅವೆರಡೂ ಒಂದಕ್ಕೊಂದು ಬೇರ್ಪಡಿಸಲಾಗದ ಹಾಗೆ ಬೆಸೆದುಕೊಂಡು ಈ ದೃಶ್ಯಕಾವ್ಯ ಜೀವತಳೆದಿದೆ.

ಇಲ್ಲಿ ಎರಡು ಕುಟುಂಬಗಳಿವೆ; ಅದೂ ಒಂದೇ ಜಾಗದಲ್ಲಿ. ಮಗ–ಮಗಳು, ತಂದೆಯ ಆ ಕುಟುಂಬದಲ್ಲೀಗ ಮಕ್ಕಳಿಬ್ಬರೂ ಇಲ್ಲ. ವೃದ್ಧ ತಂದೆ ಎದ್ದು ನಡೆದ ಹಾಗೆಲ್ಲ ಮಕ್ಕಳ ಭಾರದಲ್ಲಿ ಕುಸಿಯುತ್ತಿದ್ದಾನೆ. ಇನ್ನೊಂದು ಕುಟುಂಬ ಗಂಡ–ಹೆಂಡತಿಯ ಸಣ್ಣ ಮುದ್ದು ಕುಟುಂಬ. ಆದರೆ ಹೆಂಡತಿಯೀಗ ಇಲ್ಲ. ಅವಳ ನೆನಪು ಅಡಿಗಡಿಗೆ ಎದುರಾಗಿ ಗ್ಯಾಸೊಲೆಯ ಬೆಂಕಿಯಲ್ಲಿ ಕೈಯೊಟ್ಟಿಗೆ ಮನಸ್ಸನ್ನೂ ಸುಟ್ಟುಕೊಂಡು ದುಃಖಿಸುತ್ತಿದ್ದಾನೆ ಗಂಡ.

ಇಲ್ಲದ ಜನರ ಮಾತು ಮತ್ತು ಇರುವವರ ಮೌನಗಳನ್ನು ಹೆಣೆದು ನಿರ್ದೇಶಕಿ ಸ್ಮೃತಿ ಸಿಂಗ್ ಈ ಕಿರುಚಿತ್ರವನ್ನು ಕಟ್ಟಿದ್ದಾರೆ. ಇಡೀ ಚಿತ್ರ, ಇಲ್ಲದವರು ಮೈಕಿನ ಮುಂದೆ ನಿಂತು ಹೇಳುವ ಕಾವ್ಯದ ಸಾಲುಗಳು ಮತ್ತು ಇರುವ ಎರಡು ಪಾತ್ರಗಳು ಮನೆಯಲ್ಲಿ ಹೆಣಗುವ ದೃಶ್ಯದ ಮೂಲಕವೇ ರೂಪುಗೊಂಡಿದೆ.

ಕೊರೊನಾ ಸಂಕಷ್ಟದ ಹಿನ್ನೆಲೆಯಲ್ಲಿ ಈ ಕಿರುಚಿತ್ರವನ್ನು ನೋಡಿದಾಗ ಬೇರೆಯದೇ ಪ್ರಭೆಯಲ್ಲಿ ಹೊಳೆಯಲಾರಂಭಿಸುತ್ತದೆ. ನಮ್ಮ ಹತ್ತಿರದ ಸಂಬಂಧಿಕರ, ಕುಟುಂಬದ ಒಬ್ಬಿಬ್ಬರನ್ನಾದರೂ ಕಳೆದುಕೊಂಡ ನೋವಿನಲ್ಲಿರುವ ನಮಗೆಲ್ಲ ಈ ಕಿರುಚಿತ್ರ ಕ್ಷಣಕಾಲ ದುಃಖ ಮರೆಸುವ ಅಥವಾ ಹೆಪ್ಪುಗಟ್ಟಿಕೊಂಡಿದ್ದ ದುಃಖದ ಕಟ್ಟೊಡೆಯುವಂತೆ ಮಾಡುವ ಮುಲಾಮಾಗಿ ಕಾಣಿಸುತ್ತದೆ. ಈ ಭಾವತೀವ್ರ ಕಥನದ ನಿರೂಪಣೆಗೆ ಕಾವ್ಯದ ಮಾರ್ಗ ಆಯ್ಕೆ ಮಾಡಿಕೊಂಡಿರುವುದೂ ಅದರ ಸತ್ವವನ್ನು ಇನ್ನಷ್ಟು ಹೆಚ್ಚಿಸಿದೆ. ತಾಂತ್ರಿಕ ಪರಿಪೂರ್ಣತೆ, ತಂತ್ರ, ಅಭಿನಯದ ಸೂಕ್ಷ್ಮಗಳು ಹೀಗೆಲ್ಲ ವಿಭಾಗಿಸಿ ನೋಡಲಾಗದಷ್ಟು ನಮ್ಮ ಮನಸ್ಸನ್ನು ಆವರಿಸಿಕೊಂಡುಬಿಡುತ್ತದೆ ಮತ್ತು ಈ ಗುಣವೇ ಅದರ ಯಶಸ್ಸಿನ ಸೂಚನೆಯೂ ಹೌದು.

ಕೊರೊನಾದ ಮೂರನೇ ಅಲೆಯಲ್ಲಿ ಮತ್ತೊಂದು ಲಾಕ್‌ಡೌನ್ ಹೊಸ್ತಿಲಲ್ಲಿ ಆತಂಕದಲ್ಲಿ ನಿಂತಿರುವ ನಾವೆಲ್ಲ ಎದೆಯಲ್ಲಿ ಮತ್ತೆ ಮತ್ತೆ ಪಠಿಸುತ್ತಲೇ ಇರಬೇಕಾದ ಮಂತ್ರದಂಥ ಇನ್ನೊಂದು ಸಾಲಿನೊಂದಿಗೆ ಈ ಕಿರುಚಿತ್ರ ಮುಗಿಯುತ್ತದೆ:

‘ಕಷ್ಟ್ ಬಡೇ ಹೆ ಜೀವನ್ ಸೆ
ಇಸ್ಕಾ ಉಪಾಯ್ ನಹಿ ಮಿಲ್ ಪಾಯೇಗಾ
ಪರ್ ಬೈಟ್ ಕೆ ದೇಖೋ ಕಿಸೀ ಕೆ ಸಾಥ್
ಮನ್ ಹಲ್ಕಾ ಹೋ ಜಾಯೇಗಾ’

(ಮುಗಿಯದ ಸಂಕಷ್ಟಗಳಿವೆ ಬದುಕಿನಲ್ಲಿ / ಅವಕ್ಕೆ ಪರಿಹಾರವಿಲ್ಲ /ಆದರೆ ಕೂತು ನೋಡು ಯಾರದಾದರೂ ಪಕ್ಕದಲ್ಲಿ /ಮನಸು ತಂತಾನೆಯೇ ಬೆಳಗುವುದಲ್ಲ)

ಕಿರುಚಿತ್ರ ವೀಕ್ಷಣೆಗೆ
https://bit.ly/32TOZe9
ಕೊಂಡಿ/ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.